# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆಃ ಸ್ಪೆಷಲ್ ಎನ್.ಡಿ.ಪಿ.ಎಸ್. 6/2023

**ಪಿರ್ಯಾದಿದಾರರು** – ರಾಜ್ಯದ ಪರವಾಗಿ
ಪ್ರಾಜ್ಞ ಸರ್ಕಾರಿ ಅಭಿಯೋಜಕರು,
ಹಾವೇರಿ.

**– ವಿರುದ್ಧ –**

**ಆರೋಪಿತರು** –1. ಅಜಯ ತಂದೆ ಆನಂದ
ಹಾಗೂ ಇನ್ನೊಬ್ಬರು

***:: ದೋಷಾರೋಪಣೆ ::***

ಹಾವೇರಿಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರಾದ ಶ್ರೀ ಬಿರಾದಾರ ದೇವಿಂದ್ರಪ್ಪ ಎನ್., ಬಿ.ಎ., ಎಲ್.ಎಲ್.ಬಿ.(ಸ್ಪೆಶಲ್); ನಾನು ಈ ಕೆಳಕಂಡ ಆರೋಪಿಯಾದ -

1. ಅಜಯ ತಂದೆ ಆನಂದ (ಮೃತ)
2. ಯಾಸಿನ್ ತಂದೆ ಮಹಮ್ಮದ ಜಾಫರ ನಾಶಿಪುಡಿ,
   ವಯಸ್ಸುಃ 22 ವರ್ಷ, ಉಃ ಕೂಲಿ ಕೆಲಸ,
   ವಾಸ ಸ್ಥಳಃ ಹಾವೇರಿ, ಹಾವೇರಿ ಜಿ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕಃ09/08/2023 ರಂದು ಬೆಳಿಗ್ಗೆ 9.30 ಘಂಟೆಯಿಂದ 11.45 ಘಂಟೆಯ ಅವಧಿಯಲ್ಲಿ ಹಾವೇರಿ ಸಿ.ಇ.ಎನ್. ಕ್ರೈಂ ಪೊಲೀಸ್ ಠಾಣಾ ವ್ಯಾಪ್ತಿಯ, ಹಾವೇರಿ ತಾಲೂಕಿನ, ತೋಟದಯಲ್ಲಾಪುರ ಗ್ರಾಮದ ಬೈಪಾಸನಿಂದ ಹುಬ್ಬಳ್ಳಿ ಕಡೆಗೆ ಹೋಗುವ ಸರ್ವಿಸ್ ರಸ್ತೆಯ ಎನ್.ಎಚ್-48 ರಸ್ತೆಯ ಬ್ರಿಡ್ಜ ಪಕ್ಕದಲ್ಲಿ, 2 ನೇ ಆರೋಪಿಯಾದ ನೀವು ಕೆಂಪು ಮತ್ತು ಕಪ್ಪು ಬಣ್ಣದ ಕಾಲೇಜ ಬ್ಯಾಗನಲ್ಲಿ ಹೂವು, ಮೊಗ್ಗು ಬೀಜ ಮಿಶ್ರಿತ ಗಂಟು ಗಂಟಾದ ಒಣಗಿದ ಘಾಟು ವಾಸನೆಯುಳ್ಳ

ಅಂದಾಜು ರೂ.10,000/- ಮೌಲ್ಯದ 1005 ಗ್ರಾಂ ತೂಕದ ಗಾಂಜಾ, ಮಾರಾಟಕ್ಕಾಗಿ ಸ್ವಾಧೀನ ಹೊಂದಿ, ಈ ನ್ಯಾಯಾಲಯದ ಸಂಜ್ಞೆಯ ವ್ಯಾಪ್ತಿಯಲ್ಲಿ ಎನ್.ಡಿ.ಪಿ.ಎಸ್. ಕಾಯ್ದೆ-1985 ರ ಕಲಂ.20(b)(ii)(B) ರಡಿಯ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ.

ಈ ಮೇಲೆ ಹೇಳಿದ ದೋಷಾರೋಪಣೆಗಳಿಗಾಗಿ ಈ ನ್ಯಾಯಾಲಯದ ಮುಂದೆ ಅಧಿವಿಚಾರಣೆ ನಡೆಯಲಿದೆ.

**ಹಾವೇರಿ** **(ಬಿರಾದಾರ ದೇವಿಂದ್ರಪ್ಪ ಎನ್.)**
**ದಿನಾಂಕಃ 23/07/2025** **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.**

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆಃ ಸ್ಪೆಷಲ್ ಎನ್.ಡಿ.ಪಿ.ಎಸ್.6/2023

ಫಿರ್ಯಾದಿ - ಸರಕಾರ – ಪ್ರತಿನಿಧಿಸುವವರು
ಸರಕಾರಿ ಅಭಿಯೋಜಕರು, ಹಾವೇರಿ.

**– ವಿರುದ್ಧ –**

ಆರೋಪಿ -2. ಯಾಸಿನ್ ತಂದೆ ಮಹಮ್ಮದ ಜಾಫರ ನಾಶಿಪುಡಿ,
ವಯಸ್ಸುಃ 22 ವರ್ಷ, ಉಃ ಕೂಲಿ ಕೆಲಸ,
ವಾಸ ಸ್ಥಳಃ ಹಾವೇರಿ, ಹಾವೇರಿ ಜಿ.

## ಆರೋಪಿಯ ಹೇಳಿಕೆ

ಪ್ರಶ್ನೆ-1 - ನಿಮ್ಮ ಮೇಲೆ ಓದಿ ಹೇಳಲಾದ ದೋಷಾರೋಪಣೆಯನ್ನು ತಿಳಿದುಕೊಂಡಿರುವಿರಾ?

ಉತ್ತರ - ತಿಳಿಯಿತು.

ಪ್ರಶ್ನೆ-2 - ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ಅಧಿವಿಚಾರಣೆ ಬಯಸುತ್ತೀರೋ?

ಉತ್ತರ - ವಿಚಾರಣೆಯಾಗಲಿ.

ಆರೋಪಿ ಸಹಿ

(ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ದೋಷಾರೋಪಣೆಯನ್ನು ಓದಿ ಹೇಳಿ, ಅವರು ಕೊಟ್ಟ ಹೇಳಿಕೆಯನ್ನು, ನಾನೇ ಸ್ವತಃ ದಾಖಲಿಸಿಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ.)

**ಸ್ಥಳಃ ಹಾವೇರಿ**

**ದಿನಾಂಕಃ 23/07/2025** **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.**